ಆ) ಇಲ್ಲಿಯವರೆವಿಗೆ ಒಪ್ಪಿಕೊಂಡು ಮತ್ತು ಜಾರಿಗೊಳಿಸಿರುವ ಶಿಫಾರಸ್ಸುಗಳ ಸಂಖ್ಯೆ ಎಷ್ಟು; (ಮೂರು ವರ್ಷಗಳಿಂದ ಈಚೆಗಿನ ವಿವರಗಳನ್ನು ಒದಗಿಸುವುದು);

ಇ) ಸರ್ಕಾರದಿಂದ ತಿರಸ್ಕರಿಸಲಾದ ಶಿಫಾರಸ್ಸುಗಳ ಸಂಖ್ಯೆ ಮತ್ತು ಅದಕ್ಕೆ ಕಾರಣಗಳು

ಶ್ರೀ ಎಂ. ವೀರಪ್ಪಮೊಯಿಲಿ

(ಮುಖ್ಯಮಂತ್ರಿಗಳು)

ಇಲ್ಲ

"ಆ" ನಲ್ಲಿ ಒದಗಿಸಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

-ಅದೇ-

ವಿಷಯ:- ರೈತರಿಗೆ ಮೊಟ್ಟೆ ಸರಬರಾಜು ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 163(425)

ಶ್ರೀ ಸಾದತ್ ಆಲಿಖಾನ್(ಚನ್ನಪಟ್ಟಣ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ರೈತರಿಗೆ ಮೊಟ್ಟೆಯು ದೊರೆಯುವ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಉತ್ತಮ ತಳಿಯ ಮೊಟ್ಟೆಯನ್ನು ಸಕಾಲದಲ್ಲಿ ರೈತರಿಗೆ ಸರಬರಾಜು ಮಾಡಲು ಕೈಗೊಂಡಿರುವ ಕ್ರಮಗಳೇನು?

ಇ) ರೇಷ್ಮೆ ಗೂಡನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳೇನು?

ಡಾ. ಜಿ.ಪರಮೇಶ್ವರ

(ರೇಷ್ಮೆ ರಾಜ್ಯ ಸಚಿವರು)

ಇಲ್ಲ.

1. 85 ಸರ್ಕಾರಿ ಬಿತ್ತನೆ ಕೋಠಿಗಳನ್ನು ರಾಜ್ಯದ ಎಲ್ಲಾ ಸ್ಥಳಗಳಲ್ಲಿ ಸ್ಥಾಪಿಸಿ ರೇಷ್ಮೆ ಬಿತ್ತನೆ ಮೊಟ್ಟೆಯನ್ನು ತಯಾರಿಸಲಾಗುತ್ತಿದೆ.

2. ಕೇಂದ್ರ ರೇಷ್ಮೆ ಮಂಡಳಿಯ 7 ಬಿತ್ತನೆ ಕೋಠಿಗಳನ್ನು ಸ್ಥಾಪಿಸಿ ಬಿತ್ತನೆ ಮೊಟ್ಟೆಯನ್ನು ತಯಾರಿಸಲಾಗುತ್ತಿದೆ.

3. 764 ಖಾಸಗಿ ಬಿತ್ತನೆ ಕೋಠಿಗಳಿಗೆ ಪರವಾನಗಿ ಕೊಡಲಾಗಿದ್ದು ಅವರೂ ಸಹ ಬಿತ್ತನೆ ಮೊಟ್ಟೆ ತಯಾರು ಮಾಡುವುದರಲ್ಲಿ ತೊಡಗಿದ್ದಾರೆ.

ರೇಷ್ಮೆ ಗೂಡು ಮಾರಾಟ ಮಾಡತಕ್ಕ ರೈತರಿಗೆ ಸರ್ಕಾರಿ ಮಾರುಕಟ್ಟೆಗಳಲ್ಲಿ ಗೂಡಿನ ಗುಣಮಟ್ಟಕ್ಕೆ ತಕ್ಕ ಬೆಲೆ, ಸರಿಯಾದ ತೂಕ, ತಕ್ಷಣದ ಹಣ ಪಾವತಿಯಾಗುತ್ತಿರುವುದರಿಂದ ಮಾರುಕಟ್ಟೆಯ ಹೊರಗೆ ವ್ಯವಹಾರಗಳು ನಡೆಯುವುದು ಬಹಳ ಅಪರೂಪ. ಆದರೂ ಸಹ, ಕೆಲವೊಮ್ಮೆ ಈ ರೀತಿಯ ವ್ಯವಹಾರಗಳು ಆಗುವವೆಂಬ ಶಂಕೆಯಿಂದ ಸ್ಥಳೀಯ ಅಧಿಕಾರಿಗಳು ಮತ್ತು ರೇಷ್ಮೆ ಇಲಾಖೆಯ ಕಾನೂನು ಜಾರಿ ವಿಭಾಗದವರು ಪಹರೆ ನಡೆಸುತ್ತಿದ್ದಾರೆ.